**ಅಪರ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ.ನಂ.612-2023**

ಹೆಸರು : ಕಾರ್ತಿಕ್
ತಂದೆ ಹೆಸರು : ನಾರಾಯಸ್ವಾಮಿ
ವಯಸ್ಸು : 23
ಉದ್ಯೋಗ : ಖಾಸಗಿ ಉದ್ಯೋಗ
ವಾಸ : ಹಂದರಹಳ್ಳಿ

ಸಿಡಬ್ಲ್ಯೂ-1, ಪಿಡಬ್ಲ್ಯೂ-1
ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.
ದಿನಾಂಕಃ 07-04-2026

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ</u>**

1. ಚಾಸಾ 2 ನನ್ನ ತಂದೆ. ಚಾಸಾ 3 ರಿಂದ ಚಾಸಾ 5 ರವ ರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ ಆರೋಪಿಗಳು 2022 ನೇ ಸಾಲನಲ್ಲಿ ನಾವು ವಾಲಿಬಾಲ್ ಆಡುತ್ತಿದ್ದಾಗ , ನೆಟ್ ಹರಿದು ಹಾಕಿರುತ್ತಾರೆ. ಈ ವಿಚಾರವಾಗಿ ನಮ್ಮ ಮತ್ತು ಆರೋಪಿಗಳ ನಡುವೆ ಮಾತಿನಲ್ಲಿ ಗಲಾಟೆ ಆಗಿರುತ್ತದೆ. ಈ ವಿಚಾರವನ್ನೇ ಆರೋಪಿಗಳು ಮನಸ್ಸಿ ನಲ್ಲಿ ಇಟ್ಟುಕೂಂಡು ನಮ್ಮ ಮೇಲೆ ದ್ವೇಷ ಸಾಧಿಸುತ್ತಿದ್ದಾರೆ. ದಿನಾಂಕ 23-03-2023 ರಂದು ಸಂಜೆ 06.00 ಸಮಯದಲ್ಲಿ ಕಾಳಮ್ಮನ ದೇವ ಸ್ಥಾನದ ಬಳಿ ನಾನು ವಾಕಿಂಗ್ ಹೋದಾಗ ಆರೋಪಿಗಳು ವಾಲಿಬಾಲ್ ಆಡುವ ವಿಚಾರದಲ್ಲಿ ನಮ್ಮ ಮೇಲೆ ಗಲಾಟೆ ಮಾಡುತ್ತೀಯಾ ಎಂದು ಹೇಳಿ ನನನ್ನು ಅಡ್ಡ ಗಟ್ಟಿ ತಡೆದು, ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆರೋಪಿಗಳಿಬ್ಬರು ತಮ್ಮ ಕೈ ಮುಷ್ಟಿಯಿಂದ ನನ್ನ ತಲೆ, ಎದೆ ಕೈ ಹಾಗೂ ದೇಹದ ಇತರ ಭಾಗಗಳ ಮೇಲೆ ದಾಳಿ ಮಾಡಿರುತ್ತಾರೆ. ನಾನು ಬೇಡವೆಂದರೂ ಸಹ ನನ್ನ ಮೇಲೆ ಹಲ್ಲೆ ಮಾಡುತ್ತಲೇ ಇದ್ದರು. ನಂತರ ನಾನು ತಪ್ಪಿಸಿಕೊಂಡು ನಮ್ಮ್ನ ಮನೆಯ ಕಡೆ ಬರುವಾಗ, ನನನ್ನು ಅಡ್ಡಗಟ್ಟಿ ತಡೆದು ಇನ್ನೊಮ್ಮೆ ನಮ್ಮ್ರ ತಂಟೆಗೆ ಬಂದರೆ ಜೀವ ಸಹಿತ ಬಿಡುವುದಿಲ್ಲ ಎಂದು ಆರೋಪಿಗಳು ಪ್ರಾಣ ಬೆದರಿಕೇ ಹಾಕಿದರು. ನಂತರ ನಾನು ಮನೆಗೆ ಬಂದು ಇದ್ದ ವಿಚಾರವನ್ನು ನಮ್ಮ ಮನೆಯವರಿಗೆ ತಿಳಿಸಿರುತ್ತೇನೆ. ನನ್ನ ಎದೆ ಮತ್ತು ತಲೆಯಲ್ಲಿ ತೀವ್ರ ನೋವಾದ ಕಾರಣ ನನ್ನ

ತಂದೆ ನನನ್ನು ಚಿಕಿತ್ಸಗಾಗಿ ದೇವನಹಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಚಿಕಿತ್ಸೆ ಪಡೆದು ಮರುದಿನ ಚನ್ನರಯಯಪಟ್ಟಣ ಪೋಲಿಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ . ಸಾಕ್ಷಿ ದೂರನ್ನು ನೋಡಿ ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ಪೋಲಿಸರು ನಂತರ ಘಟನಾ ಸ್ಥಳಕ್ಕೆ ಬಂದು ಅಲ್ಲಿ ಮಹಜರು ಮಾಡಿರುತ್ತಾರೆ. ಆಗ ಮಹಜರಿಗೆ ಸಹಿ ಮಾಡಿರುತ್ತೇನೆ. ಸಾಕ್ಷಿ ಮಹಜರನ್ನ ನೋಡಿ ಅದರಲ್ಲಿರುವ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಮಹಜರನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2 (ಎ) ಎಂದು ಗುರುತಿಸಲಾಯಿತು. ಸಾಕ್ಷಿ ಕಡತದಲ್ಲಿರುವ ಒಂದು ಛಾಯಾ ಚಿತ್ರವನ್ನು ನೋಡಿ ಘಟನಾ ಸ್ಥಳದಲ್ಲಿ ತೆಗೆದ ಛಾಯಾಚಿತ್ರ ಎಂದು ಗುರುತಿಸಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ ಕಾಲಾವಲಾಶ ಕೋರಿದ್ದು, ನೀಡಲಾಯಿತು)

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.**

**ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ**